**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 96/2020**

**ಚಾ.ಸಾಃ 14, ಫ್ರಾ.ಸಾಃ 08**

| | |
|---|---|
| ಸಾಕ್ಷಿದಾರನ ಹೆಸರು | ವಸಂತ ಆಚಾರ್ |
| ತಂದೆಯ ಹೆಸರು | ರಾಮಾ ಆಚಾರ್ |
| ವಯಸ್ಸು | 58 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಗೋಕರ್ಣ ಪೋಲೀಸ್ ಠಾಣೆ |
| ವಾಸ್ತವ್ಯ | ಗೋಕರ್ಣ |

**ಸಾಕ್ಷಿಯನ್ನು ದಿನಾಂಕಃ 19-10-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿನಾಂಕ 25-09-2019 ರಿಂದ 03-10-2020 ರ ವರೆಗೆ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕಃ **31-07-2020** ನಾನು ಸಿಬ್ಬಂದಿಯೊಂದಿಗೆ ಕಡತೋಕಾ ಜಡ್ಡಿಗದ್ದೆ ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಚಂದಾವರ ಕಡೆಯಿಂದ ಮೋಟಾರು ಸೈಕಲ್ಲಿನಲ್ಲಿ 2 ಜನ ಬರುತ್ತಿದ್ದು ಅವರನ್ನು ಹಿಡಿದು ವಿಚಾರಿಸಲಾಗಿ ಅವರು ಯಾವುದೇ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಅವರನ್ನು ಠಾಣೆಗೆ ಕರೆತಂದು ಹೆಸರು, ವಿಳಾಸ ವಿಚಾರಿಸಲಾಗಿ ಅವರು ಸಜ್ಜದ್ ಅಹ್ಮದ್ ತಂದೆ ಕುತುಬುದ್ದಿನ್ ಗಣಿ ಮತ್ತು ಮುಬಾಶಿರ್ ಕುತುಬುದ್ದಿನ್ ಗಣಿ, ಚಂದಾವರ ಎಂದು ತಿಳಿಸಿರುತ್ತಾರೆ. ಸಂಶಯದಿಂದ ಅವರನ್ನು ಕೂಲಂಕುಷವಾಗಿ ವಿಚಾರಿಸಲಾಗಿ ಅವರು ಈ ಪ್ರಕರಣದಲ್ಲಿ ಕಳುವು ಮಾಡಿರುವುದನ್ನು ಒಪ್ಪಿಕೊಂಡು ಸ್ವ ಖುಷಿ ಹೇಳಿಕೆಯನ್ನು ನೀಡಿರುತ್ತಾರೆ. ಅವರು ತಮ್ಮ ಹೇಳಿಕೆಯಲ್ಲಿ ಈ ಪ್ರಕರಣ ಅಲ್ಲದೇ ಇತರೇ 8 ಪ್ರಕರಣಗಳಲ್ಲಿ ತಾವು ಕಳುವು ಮಾಡಿರುವುದಾಗಿ ತಿಳಿಸಿರುತ್ತಾರೆ. ಆರೋಪಿತರು ತಾವು ಕಳುವು ಮಾಡಿರುವ ಸ್ಥಳವನ್ನು ಮತ್ತು ಮಾಲಿನ ಬಗ್ಗೆ ಮಾಹಿತಿ ನೀಡುವುದಾಗಿ ಹೇಳಿರುತ್ತಾರೆ.

ದಿನಾಂಕ 01-08-2020 ರಂದು ಠಾಣಾ ಆವರಣದಲ್ಲಿದ್ದ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಬೈಕನ್ನು ಪಂಚರ ಸಮಕ್ಷಮ ಬೆಳಿಗ್ಗೆ 09-00 ರಿಂದ 09-30 ರ ಸಮಯದಲ್ಲಿ ಅಮಾನತ್ತುಪಡಿಸಿಕೊಂಡು ಫೋಟೋ ತೆಗೆಸಿರುತ್ತೇನೆ. ಸದರಿ ಬೈಕನ್ನು ಕ್ರೈಂ ನಂ.67/2020 ರಲ್ಲಿ ಠಾಣಾ ಪಿಎಫ್ ನಲ್ಲಿ ನಮೂದಿಸಿರುತ್ತೇನೆ.

ಸದರಿ ಪ್ರಕರಣದಲ್ಲಿ ಆರೋಪಿತರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದು ಆರೋಪಿತರು ಈ ಪ್ರಕರಣ ಅಲ್ಲದೇ ಇತರೇ ಪ್ರಕರಣಗಳಲ್ಲಿ ಕಳ್ಳತನ ಮಾಡಿರುವುದಾಗಿ ಹೇಳಿಕೆ ನೀಡಿರುತ್ತಾರೆ.

ಆರೋಪಿತರನ್ನು ರಿಮಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದ್ದು ದಿನಾಂಕ 04-08-2020 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಪುನಃ ಆರೋಪಿತರನ್ನು ಪೋಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ.

ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಹೇಳಿರುವಂತೆ ವಿವಿಧ ಪ್ರಕರಣದ ಸ್ಥಳಗಳಿಗೆ ಭೇಟಿ ನೀಡಿ ಪಂಚನಾಮೆ ತಯಾರಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಮುಂದುವರಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಂದಾವರದ ನೂರಾನಿ ಮೊಹಲ್ಲಾದಲ್ಲಿ ಈ ಪ್ರಕರಣದ ಪಿರ್ಯಾದಿಯ ಮನೆಯ ಹತ್ತಿರ ಆರೋಪಿತರು ನಮ್ಮನ್ನು ಕರೆದುಕೊಂಡು ಹೋಗಿ ಸದರಿ ಮನೆಯನ್ನು ತೋರಿಸಿ ಸದರಿ ಮನೆಯ ಮುಂಬಾಗಿಲ ಚಿಲಕವನ್ನು ಕಬ್ಬಿಣದ ರಾಡ್‌ನಿಂದ ಮುರಿದು ಮನೆಯ ಒಳಗೆ ಹೋಗಿ ಮನೆಯ ಬೆಡ್ ರೂಮ್‌ನ ಕಪಾಟಿನಲ್ಲಿದ್ದ ಹಣ ಮತ್ತು ಬಂಗಾರದ ಆಭರಣವನ್ನು ಕಳುವು ಮಾಡಿರುವುದಾಗಿ ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪಂಚರ ಸಮಕ್ಷಮ 04-40 ರಿಂದ 04-50 ರ ವರೆಗೆ ಪಂಚನಾಮೆ ತಯಾರಿಸಿ ಸ್ಥಳದಲ್ಲಿ ಫೋಟೋ ತೆಗೆಸಿರುತ್ತೇನೆ.

ನಂತರ ಆರೋಪಿತರನ್ನು ತಮ್ಮ ಸ್ವ ಇಚ್ಛಾ ಹೇಳಿಕೆಯಂತೆ ವಿವಿಧ ಸ್ಥಳಗಳಿಗೆ ಕರೆದುಕೊಂಡು ಹೋಗಿ ಸದರಿ ಪಂಚನಾಮೆಯನ್ನು ಮುಂದುವರಿಸಿ ಆರೋಪಿತರು ತೋರಿಸಿದ ಸ್ಥಳಗಳಲ್ಲಿ ಪಂಚನಾಮೆಯನ್ನು ತಯಾರಿಸುತ್ತಾ ಸ್ಥಳಗಳಲ್ಲಿ ಫೋಟೋ ತೆಗೆಸಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ನಕಲನ್ನು ನೋಡುತ್ತಿದ್ದು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸ್ಥಳಗಳಲ್ಲಿ ತೆಗೆದ 5 ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ-9 ರಿಂದ 13 ಎಂದು ಗುರುತಿಸಲಾಯಿತು.

ದಿನಾಂಕ 05-08-2020 ರಂದು ಆರೋಪಿತರು ಕಳುವು ಮಾಡಿದ್ದ ಬಂಗಾರವನ್ನು ತಮ್ಮ ಪರಿಚಯದವರಾದ ಚಾಸಾ-10 ರವರ ಬಳಿ ಗಿರವಿ ಇಟ್ಟಿದ್ದು ಚಾಸಾ-10 ರವರು ಹೊನ್ನಾವರದ ವೃತ್ತ ಕಚೇರಿಗೆ ಬಂದು ಮಧ್ಯಾಹ್ನ 01-00 ರಿಂದ 02-00 ಗಂಟೆ ಸಮಯದಲ್ಲಿ ಹಾಜರು ಪಡಿಸಿದ್ದು ಅವರು ಹಾಜರುಪಡಿಸಿದ ಸುಮಾರು 9 ಐಟಂ ಒಡವೆಗಳನ್ನು ಪಂಚರ ಸಮಕ್ಷಮ ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನೋಡುತ್ತಿದ್ದು ನಿಪಿ-7 ಎಂದು ಗುರುತಿಸಲಾಗಿದೆ. ಸದರಿ ಆಭರಣಗಳ ಪೈಕಿ 7 ನೇ ಐಟಂ ಒಂದು ಜೊತೆ ಕಿವಿಯೋಲೆ ಈ ಪ್ರಕರಣಕ್ಕೆ ಸಂಬಂಧಪಟ್ಟ ಒಡವೆ ಆಗಿರುತ್ತದೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ಕಾಲಕ್ಕೆ ಚಾಸಾ-10 ಮತ್ತು 11 ರವರ ಹೇಳಿಕೆ ಪಡೆದು ಸದರಿ ಒಡವೆಗಳನ್ನು ಚಾಸಾ-11 ರವರಿಂದ ತೂಕ ಹಾಕಿಸಿದ್ದು ಅವರಿಂದ ರಸೀದಿ ಪಡೆದಿರುತ್ತೇನೆ. ಸದರಿ ರಸೀದಿ ಪತ್ರದ ಪ್ರತಿಯನ್ನು ನೋಡುತ್ತಿದ್ದು ನಿಪಿ-7 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ- ಆರೋಪಿಗಳ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**